# 'Serve poor with honesty to make medical profession more meaningful'

KOLAR, DHNS

Honesty and commitment bring laurels and respects to doctors, but not money, said Dr P Satish Chandra, retired vice-chancellor,Nimhans.

"Life is more valuable than money. Doctors should realise this and serve with honest and commitment so that they earn respect in society," he said after inaugurating buildings of Emergency Medical Services, Advance Research and Excellence and The Speech and Hearing section at Sri Devaraj Urs Academy of Higher Education and Research (SDUAHER).

Dr Satish regretted that the medical profession had become a means to make money and said that most doctors lack service motto.

"Students obtained medical education in India and work in foreign countries only to make money which is deplorable," he said.

The former Nimhans director said that it was impossible to achieve the target in medical field without research.

"Students should be trained in research and skills to attend poor patients visiting the hospitals for treatment. Human values are more important than money in medical profession," he said.

Dr Saith Chandra stated that students should understand trends in the research field and their uses to the society.

"There have been quality research activities and discoveries in the past. However, only a few of them have given results," he said.

He said that the relationship between a doctor and a patient was important important and doctors could cure any disease completely if they treated with confidence. "Medical degrees will have meaning if doctors treat poor patients honestly," he said.

Apollo Hospital Emergency Medical Services section chairperson Dr C Aruna said that about 6 lakh people met with accident and lose vital organs in accidents across the country daily.

"They face troubles as they don't get emergency medical services," she said.

SDUAHER secretary G H Nagaraj lamented that human values had disappeared in medical field. Students should get admission to college with the motto to serve the society.

About five persons die of heart attack every minute in the country. Technology has advanced much in every field. It has helped new inventions in medicine. Students should have the knowledge of advanced technology, she said.

SDUAHER director J Rajendra, vice-chancellor, Dr S Kumar, registrar Dr K N V Prasad, retired VCs Dr A V M Kutti, Dr C K Ranjan, medical superintendent Dr Lakshmaiah, Dean Dr Sriramulu and Dr K Rajesh were present.



Ex-serviceman Ravi was felicitated on the occasion.



Dr P Satish Chandra, retired vice-chancellor,Nimhans, speaks after inaugurating new buildings at Sri Devaraj Urs Academy of Higher Education and Research in Kolar on Thursday.

ಪ್ರಜಾವಾಣಿ



## ನಿಮ್ಹಾನ್ಸ್ ವಿಶ್ರಾಂತ ಉಪ ಕುಲಪತಿ ಸತೀಶ್‌ಚಂದ್ರ ಅಭಿಪ್ರಾಯ

# ವೈದ್ಯ ವೃತ್ತಿಯಲ್ಲಿ ಮಾನವೀಯತೆ ಮುಖ್ಯ

ಪ್ರಜಾವಾಣಿ ವಾರ್ತೆ

ಕೋಲಾರ: 'ಹಣಕ್ಕಿಂತ ಜೀವ ದೊಡ್ಡದು. ವೈದ್ಯರು ಈ ಸಂಗತಿ ಅರಿತು ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ, ಬದ್ಧತೆ ತೋರಿದಾಗ ಮಾತ್ರ ಸಮಾಜದಲ್ಲಿ ಗೌರವ ಗಳಿಸಲು ಸಾಧ್ಯ' ಎಂದು ನಿಮ್ಹಾನ್ಸ್ ವಿಶ್ರಾಂತ ಉಪ ಕುಲಪತಿ ಡಾ.ಪಿ.ಸತೀಶ್‌ಚಂದ್ರ ಅಭಿಪ್ರಾಯಪಟ್ಟರು.

ಇಲ್ಲಿ ಗುರುವಾರ ನಡೆದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ತುರ್ತು ವೈದ್ಯಕೀಯ ಸೇವೆ, ವಾಕ್ ಶ್ರವಣ ಹಾಗೂ ಅಡ್ವಾನ್ಸ್ ರೀಸರ್ಚ್ ಅಂಡ್ ಎಕ್ಸಲೆನ್ಸ್ ವಿಭಾಗಗಳ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

'ದೇಶದಲ್ಲಿ ವೈದ್ಯಕೀಯ ಕ್ಷೇತ್ರವು ಹಣ ಮಾಡುವ ದಂಧೆಯಾಗಿದೆ. ವೈದ್ಯರಿಗೆ ಸೇವಾ ಮನೋಭಾವ ಇಲ್ಲವಾಗಿದೆ. ವಿದ್ಯಾರ್ಥಿಗಳು ದೇಶದಲ್ಲಿ ವೈದ್ಯಕೀಯ ಪದವಿ ಪಡೆದು ಹಣ ಸಂಪಾದನೆಗಾಗಿ ವಿದೇಶಕ್ಕೆ ಹೋಗುತ್ತಿರುವುದು ವಿಷಾದಕರ' ಎಂದು ಕಳವಳ ವ್ಯಕ್ತಪಡಿಸಿದರು.

'ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನೆ ನಡೆಯದಿದ್ದರೆ ಗುರಿ ಸಾಧನೆ ಅಸಾಧ್ಯ. ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಬರುವವರಿಗೆ ಉತ್ತಮ ಸೇವೆ ನೀಡಲು ವೈದ್ಯರು ವಿದ್ಯಾರ್ಥಿ ದಿಸೆಯಲ್ಲೇ ಸಂಶೋಧನೆ ಜತೆಗೆ ಕೌಶಲ ತರಬೇತಿ ಪಡೆಯಬೇಕು. ವೈದ್ಯಕೀಯ ವೃತ್ತಿಯಲ್ಲಿ ಹಣ ಸಂಪಾದನೆಗಿಂತ ಮಾನವೀಯತೆ ಮುಖ್ಯ' ಎಂದು ಕಿವಿಮಾತು ಹೇಳಿದರು.

'ಯಾವ ವಿಚಾರದ ಬಗ್ಗೆ ಸಂಶೋಧನೆ ಮಾಡಲಾಗುತ್ತಿದೆ, ಅದರಿಂದ ಸಮಾಜಕ್ಕೆ ಏನು ಉಪಯೋಗ ಎಂಬುದನ್ನು ಅರಿಯುವುದು ಮುಖ್ಯ. ಮೊದಲಿನಿಂದಲೂ ಉನ್ನತ ಸಂಶೋಧನೆ, ಆವಿಷ್ಕಾರ ನಡೆಯುತ್ತಿವೆ. ಆದರಲ್ಲಿ ಕೆಲವಷ್ಟೇ ಫಲಿತಾಂಶ ಪಡೆದುಕೊಳ್ಳುತ್ತಿವೆ' ಎಂದು ತಿಳಿಸಿದರು.

'ರೋಗಿ ಹಾಗೂ ವೈದ್ಯರ ಸಂಬಂಧ ಪ್ರಮುಖವಾದದು. ರೋಗಿಗಳಿಗೆ ವಿಶ್ವಾಸದಿಂದ ಚಿಕಿತ್ಸೆ ನೀಡಿದರೆ ಶೇ 100ರಷ್ಟು ಗುಣಮುಖರಾಗುತ್ತಾರೆ. ಪದವಿ ಪಡೆದ ಮಾತ್ರಕ್ಕೆ ವೈದ್ಯ ಎನಿಸಿಕೊಳ್ಳಲು ಆಗುವುದಿಲ್ಲ. ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ನೀಡಿದರೆ ಪದವಿಗೆ ಅರ್ಥ ಬರುತ್ತದೆ' ಎಂದರು.

**ಪ್ರತಿನಿತ್ಯ ಅಪಘಾತ:** 'ದೇಶದಲ್ಲಿ ಪ್ರತಿನಿತ್ಯ ಸಾಕಷ್ಟು ಅಪಘಾತ ಸಂಭವಿಸುತ್ತಿದ್ದು, ಈ ಪೈಕಿ 6 ಲಕ್ಷ ಮಂದಿ ತೀವ್ರವಾಗಿ ಗಾಯಗೊಂಡು ಅಂಗಾಂಗ ಕಳೆದುಕೊಳ್ಳುತ್ತಿದ್ದಾರೆ. ತುರ್ತು ಚಿಕಿತ್ಸೆ ಸಿಗದೆ ಸಮಸ್ಯೆ ಎದುರಿಸುತ್ತಿದ್ದಾರೆ. ಅಪಘಾತ ಪ್ರಕರಣಗಳಲ್ಲಿ ಹೆಚ್ಚು ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ' ಎಂದು ಅಪೋಲೋ ಆಸ್ಪತ್ರೆ ತುರ್ತು ವೈದ್ಯ ವಿಭಾಗದ ಮುಖ್ಯಸ್ಥೆ ಡಾ.ಸಿ.ಅರುಣಾ ವಿವರಿಸಿದರು.

'ಅಪಘಾತ ಆಕಸ್ಮಿಕವಾಗಿ ನಡೆಯುತ್ತವೆ. ದೇಶದಲ್ಲಿ ಪ್ರತಿ ನಿಮಿಷಕ್ಕೆ 4 ಮಂದಿ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ. ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಬಳಕೆ ಮಾಡಿ ಹೊಸ ಆವಿಷ್ಕಾರ, ಸಂಶೋಧನೆಗೆ ಅನುವು ಮಾಡಿಕೊಡಲಾಗುತ್ತಿದೆ. ವೈದ್ಯಕೀಯ ವಿದ್ಯಾರ್ಥಿಗಳು ನೂತನ ತಂತ್ರಜ್ಞಾನ ಅರಿಯಬೇಕು' ಎಂದು ಸಲಹೆ ನೀಡಿದರು.

ದೇವರಾಜ ಅರಸು ವಿದ್ಯಾ ಸಂಸ್ಥೆ ಅಧ್ಯಕ್ಷ ಆರ್.ಎಲ್.ಜಾಲಪ್ಪ, ನಿರ್ದೇಶಕ ಜೆ.ರಾಜೇಂದ್ರ, ಕುಲಪತಿ ಡಾ.ಎಸ್.ಕುಮಾರ್, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ನಿವೃತ್ತ ಕುಲಪತಿಗಳಾದ ಡಾ.ಎ.ವಿ.ಎಂ.ಕುಟ್ಟಿ, ಡಾ.ಸಿ.ಕೆ.ರಂಜನ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ, ಡೀನ್ ಡಾ.ಶ್ರೀರಾಮುಲು, ವೈದ್ಯ ಡಾ.ಕೆ. ರಾಜೇಶ್ ಪಾಲ್ಗೊಂಡಿದ್ದರು.



ಕೋಲಾರದಲ್ಲಿ ಗುರುವಾರ ನಡೆದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ವಿವಿಧ ವಿಭಾಗಗಳ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ನಿಮ್ಹಾನ್ಸ್ ವಿಶ್ರಾಂತ ಉಪ ಕುಲಪತಿ ಡಾ.ಪಿ.ಸತೀಶ್‌ಚಂದ್ರ ಮಾತನಾಡಿದರು.

**ಮುಖ್ಯಾಂಶಗಳು**

- ವೃತ್ತಿ ಜೀವನದಲ್ಲಿ ಬದ್ಧತೆ ತೋರಿ
- ವೈದ್ಯರು ಕೌಶಲ ತರಬೇತಿ ಪಡೆಯಬೇಕು
- ವಿದ್ಯಾರ್ಥಿಗಳು ನೂತನ ತಂತ್ರಜ್ಞಾನ ಅರಿಯಿರಿ

ವೈದ್ಯಕೀಯ ವೃತ್ತಿಯಲ್ಲಿ ಮಾನವೀಯ ಮೌಲ್ಯ ಮಾಯವಾಗಿದೆ. ವೈದ್ಯರು ಸೇವಾ ಮನೋಭಾವದಿಂದ ವೃತ್ತಿಗೆ ಸೇರಬೇಕು. ಹಣ ಗಳಿಕೆ ಉದ್ದೇಶಕ್ಕೆ ವೈದ್ಯರಾದರೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ.

**-ಜಿ.ಎಚ್.ನಾಗರಾಜ್**, ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕಾರ್ಯದರ್ಶಿ

# ಸಂಶೋಧನೆ, ಕೌಶಲ ತರಬೇತಿ ಅಗತ್ಯ

■ ವಿಕ ಸುದ್ದಿಲೋಕ ಕೋಲಾರ

ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಭೇಟಿ ನೀಡುವವರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ವೈದ್ಯರು ವಿದ್ಯಾರ್ಥಿ ದೆಸೆಯಲ್ಲೇ ಸಂಶೋಧನೆ ಜತೆಗೆ ಕೌಶಲ ತರಬೇತಿ ಪಡೆಯಬೇಕು ಎಂದು ನಿಮ್ಹಾನ್ಸ್‌ನ ವಿಶ್ರಾಂತ ಉಪಕುಲಪತಿ ಡಾ.ಪಿ.ಸತೀಶ್‌ಚಂದ್ರ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರ ಹೊರವಲಯದ ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ತುರ್ತು ವೈದ್ಯಕೀಯ ಸೇವೆ, ವಾಕ್ ಶ್ರವಣ, ಅಡ್ವಾನ್ಸ್ ರೀಸರ್ಚ್ ಅಂಡ್ ಎಕ್ಸಲೆನ್ಸ್ ವಿಭಾಗಗಳ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.



ಕೋಲಾರ ಹೊರವಲಯದ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕೇಂದ್ರದಲ್ಲಿ ತುರ್ತು ವೈದ್ಯಕೀಯ ಸೇವೆ, ವಾಕ್ ಶ್ರವಣ ಹಾಗೂ ಅಡ್ವಾನ್ಸ್ ರೀಸರ್ಚ್ ಅಂಡ್ ಎಕ್ಸಲೆನ್ಸ್ ವಿಭಾಗ ಕಟ್ಟಡದ ಗಣ್ಯರು ಉದ್ಘಾಟಿಸಿದರು.

**ವಿಜ್ಞಾನವೂ ಪ್ರಾಮುಖ್ಯತೆ:** ತುರ್ತು ಸಂದರ್ಭದಲ್ಲಿ ನೀಡುವ ಚಿಕಿತ್ಸೆ ಗುಣಮಟ್ಟದಿಂದ ಕೂಡಿರಬೇಕು ಎಂದು ಹೇಳಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸಂಶೋಧನೆ ನಡೆಸದಿದ್ದರೆ ಗುರಿ ಸಾಧನೆಗೆ ಸಹಕಾರಿಯಾಗುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಆರೋಗ್ಯ ಕ್ಷೇತ್ರದಲ್ಲಿ ವೈದ್ಯಕೀಯ ವಿಜ್ಞಾನವೂ ಪ್ರಾಮುಖ್ಯತೆ ಪಡೆದಿದೆ ಎಂದರು.

**ಸಿದ್ಧವಾಗಿರಬೇಕು:** ಅಪೋಲೋ ಆಸ್ಪತ್ರೆ ತುರ್ತು ವೈದ್ಯ ವಿಭಾಗದ ಮುಖ್ಯಸ್ಥೆ ಡಾ.ಸಿ.ಅರುಣಾ ಮಾತನಾಡಿ, ಅಪಘಾತ ಆಕಸ್ಮಿಕವಾಗಿ ನಡೆಯುತ್ತದೆ. ಘಟನೆಯಿಂದ ಗಾಯಗೊಂಡಿರುವ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ.

**ಮಾಹಿತಿ ದೊರೆತ ತಕ್ಷಣ ತುರ್ತು ಚಿಕಿತ್ಸೆಗೆ ಸಿದ್ಧರಾಗಿ**

ದೇಶದಲ್ಲಿ ಪ್ರತಿ ನಿಮಿಷಕ್ಕೆ 4 ಮಂದಿ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ. ಅಪಘಾತಕ್ಕೆ ಒಳಗಾದವರನ್ನು ಆಸ್ಪತ್ರೆಗೆ ಕರೆತರುವ ಸಂದೇಶ ದೊರೆತ ತಕ್ಷಣ ತುರ್ತು ಚಿಕಿತ್ಸೆಯ ತಜ್ಞರು ಸಿದ್ಧರಾಗಿರಬೇಕು. ಜತೆಗೆ ತಂಡವಾಗಿಯೇ ಚಿಕಿತ್ಸೆ ನೀಡಬೇಕು. ಟ್ರಾಮಾ ಸೆಂಟರ್‌ನಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ಸೇವೆ ಸಲ್ಲಿಸುವ ತಜ್ಞವೈದ್ಯರು ಹಾಗೂ ನರ್ಸ್‌ಗಳು ಅದೇ ವಿಭಾಗಕ್ಕೆ ಸೀಮಿತವಾಗಿ ಸೇವೆ ಸಲ್ಲಿಸುವಂತರಿಬೇಕು. ಅರಿವಳಿಕೆ, ಎಲುಬು, ಕೀಲು ತಜ್ಞರು, ಜನರಲ್ ಸರ್ಜನ್, ರೇಡಿಯಾಲಾಜಿಸ್ಟ್, ಎಕ್ಸರೇ, ಸ್ಕ್ಯಾನಿಂಗ್ ಸೇವೆ ನೀಡುವ ತಂಡ ಇರಬೇಕು ಎಂದರು.

ಸಂಸ್ಥೆ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ಆರ್.ಎಲ್.ಜಾಲಪ್ಪ, ನಿರ್ದೇಶಕ ಜೆ.ರಾಜೇಂದ್ರ, ಕುಲಸಚಿವ ಡಾ.ಎಸ್.ಕುಮಾರ್, ಕುಲಪತಿ ಡಾ.ಕೆ.ಎನ್.ವಿ.ಪ್ರಸಾದ್, ಪ್ರೊ ಚಾನ್ಸೆಲರ್‌ಗಳಾದ ಎ.ವಿ.ಎಂ.ಕುಟ್ಟಿ, ಡಾ.ರಂಜನ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ, ಡೀನ್ ಡಾ.ಶ್ರೀರಾಮುಲು, ತುರ್ತು ಚಿಕಿತ್ಸಾ ವೈದ್ಯ ಡಾ.ಕೆ.ರಾಜೇಶ್ ಮತ್ತಿತರರು ಹಾಜರಿದ್ದರು.

ಅಂತರಗಂಗೆ



# ವೈದ್ಯ ವಿದ್ಯಾರ್ಥಿಗಳು ಸಂಶೋಧನೆ ನಡೆಸದಿದ್ದರೆ ಗುರಿ ಸಾಧನೆ ಮಾಡೋದಿಕ್ಕೆ ಆಗೋದಿಲ್ಲ: ಡಾ.ಪಿ. ಸತೀಶ್‌ಚಂದ್ರ

ಅಂತರಗಂಗೆ ಸುದ್ದಿ



ಕೋಲಾರ,ಆ.15– 'ವೈದ್ಯಕೀಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸಂಶೋಧನೆ ನಡೆಸದಿದ್ದರೆ ಗುರಿ ಸಾಧನೆ ಮಾಡಲು ಸಹಕಾರಿಯಾಗುವುದಿಲ್ಲ' ಎಂದು ನಿಮ್ಹಾನ್ಸ್‌ನ ವಿಶ್ರಾಂತ ಉಪ ಕುಲಪತಿ ಡಾ.ಪಿ.ಸತೀಶ್‌ಚಂದ್ರ ತಿಳಿಸಿದರು.

ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯಿಂದ ಗುರುವಾರ ಏರ್ಪಡಿಸಿದ್ದ ತುರ್ತು ವೈದ್ಯಕೀಯ ಸೇವೆ, ವಾಕ್ ಶ್ರವಣ ಹಾಗೂ ಅಡ್ವಾನ್ಸ್ ರೀಸರ್ಚ್ ಅಂಡ್ ಎಕ್ಸಲೆನ್ಸ್ ವಿಭಾಗಗಳ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

'ತುರ್ತು ಸಂದರ್ಭದಲ್ಲಿ ಆಸ್ಪತ್ರೆಗೆ ಬರುವವರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ವೈದ್ಯರು ವಿದ್ಯಾರ್ಥಿ ದೆಸೆಯಲ್ಲೇ ಸಂಶೋಧನೆ ಜತೆಗೆ ಕೌಶಲ್ಯ ತರಬೇತಿಯೂ ಪಡೆದುಕೊಂಡಿರಬೇಕು. ಆ ಸಂದರ್ಭದಲ್ಲಿ ನೀಡುವ ಚಿಕಿತ್ಸೆ ಗುಣಮಟ್ಟದಿಂದ ಇರಬೇಕೆಂದರು.

'ಯಾವ ವಿಚಾರದ ಬಗ್ಗೆ ಸಂಶೋಧನೆ ಮಾಡಲಾಗುತ್ತಿದೆ, ಇದರಿಂದ ಏನಾದರು ಸಮಾಜಕ್ಕೆ ಉಪಯೋಗ ಇದಿಯೇ ಎಂಬುದನ್ನು ಅರಿಯುವುದು ಮುಖ್ಯ. ಮೊದಲಿನಿಂದಲೂ ಉನ್ನತ ಮಟ್ಟದ ಸಂಶೋಧನೆ, ಆವಿಷ್ಕಾರಗಳು ನಡೆಯುತ್ತಿವೆ. ಆದರಲ್ಲಿ ಕೆಲವಷ್ಟೇ ಫಲಿತಾಂಶ ಪಡೆದುಕೊಳ್ಳುತ್ತಿವೆ' ಎಂದು ತಿಳಿಸಿದರು.

'ಆರೋಗ್ಯ ಕ್ಷೇತ್ರದಲ್ಲಿ ವೈದ್ಯಕೀಯ ವಿಜ್ಞಾನವೂ ಪ್ರಾಮುಖ್ಯತೆ ಪಡೆದುಕೊಂಡಿದೆ. ರೋಗಿಗೆ ವೈಜ್ಞಾನಿಕವಾಗಿ ಚಿಕಿತ್ಸೆ ನೀಡಲು ಅಗತ್ಯವಾದ ಯಂತ್ರೋಪಕರಣಗಳು ಜಾಲಪ್ಪ ಆಸ್ಪತ್ರೆಯಲ್ಲಿ ಲಭ್ಯವಿದೆ. ಇಲ್ಲಿಂದ ಹೊರ ಹೋದ ವೈದ್ಯರು ರಾಜ್ಯ, ರಾಷ್ಟ್ರ ಮಟ್ಟದಲ್ಲೂ ಹೆಸರು ಪಡೆದುಕೊಂಡಿದ್ದಾರೆ. ಇದಕ್ಕೆ ಸಂಶೋಧನಾ ಪದ್ಧತಿಯೇ ಕಾರಣ' ಎಂದು ಅಭಿಪ್ರಾಯಪಟ್ಟರು.

ಅಪೋಲೋ ಆಸ್ಪತ್ರೆ ತುರ್ತು ವೈದ್ಯ ವಿಭಾಗದ ಮುಖ್ಯಸ್ಥೆ ಡಾ.ಸಿ.ಅರುಣಾ ಮಾತನಾಡಿ, 'ಅಪಘಾತ, ಸಣ್ಣ ಪುಟ್ಟ ಘಟನೆಗಳಿಂದಲೇ ಇತ್ತೀಚಿನ ದಿನಗಳಲ್ಲಿ ಹೆಚ್ಚು ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದರು.

'ತುರ್ತು ಸಂದರ್ಭದಲ್ಲಿ ಆಗುವ ಘಟನೆಗಳನ್ನು ತಪ್ಪಿಸಲು ಸಾವಧಾನ್ಯರು ಪ್ರಯತ್ನಿಸಿದರೆ ಸಾಧ್ಯವಾಗುತ್ತದೆ. ಅಪಘಾತಗಳು ಆಕಸ್ಮಿಕವಾಗಿ ನಡೆಯುತ್ತವೆ. ಘಟನೆಯಿಂದ ಗಾಯಗೊಂಡಿರುವ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಬರುತ್ತಾರೆ. ದೇಶದಲ್ಲಿ ಪ್ರತಿ ನಿಮಿಷಕ್ಕೆ 4 ಮಂದಿ ಹೃದಯಾಘಾತದಿಂದ ಮೃತಪಡುತ್ತಿದ್ದಾರೆ' ಎಂದರು.

'ಅಪಘಾತಕ್ಕೊಳಗಾದವರನ್ನು ಆಸ್ಪತ್ರೆಗೆ ತರಲಾಗುತ್ತಿದೆ ಎಂಬ ಸಂದೇಶ ಆಸ್ಪತ್ರೆಯಲ್ಲಿ ದೊರೆತ ತಕ್ಷಣ ತುರ್ತು ಚಿಕಿತ್ಸೆಯ ಎಲ್ಲ ತಜ್ಞರು ಸಿದ್ಧರಾಗಿರಬೇಕು. ಜತೆಗೆ ತಂಡವಾಗಿಯೇ ಚಿಕಿತ್ಸೆ ನೀಡಬೇಕು. ಟ್ರಾಮಾ ಸೆಂಟರ್‌ನಲ್ಲಿ ತುರ್ತು ಚಿಕಿತ್ಸಾ ವಿಭಾಗದಲ್ಲಿ ಸೇವೆ ಸಲ್ಲಿಸುವ ತಜ್ಞವೈದ್ಯರು ಹಾಗೂ ನರ್ಸ್‌ಗಳು ಅದೇ ವಿಭಾಗಕ್ಕೆ ಸೀಮಿತವಾಗಿ ಸೇವೆ ಸಲ್ಲಿಸುವಂತಿರಬೇಕು. ಅರಿವಳಿಕೆ, ಎಲುಬು, ಕೀಲು ತಜ್ಞರು, ಜನರಲ್ ಸರ್ಜನ್, ರೇಡಿಯಾಲಾಜಿಸ್ಟ್, ಎಕ್ಸರೇ, ಸ್ಕ್ಯಾನಿಂಗ್ ಸೇವೆ ನೀಡುವ ತಂಡ ಇರಬೇಕು' ಎಂದು ಹೇಳಿದರು.

ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಮಾತನಾಡಿ, 'ಸಾಕಷ್ಟು ಮಂದಿ ಪ್ರಾಣತ್ಯಾಗ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು, ಇದು ಒಂದು ದಿನಕ್ಕೆ ಸೀಮಿತವಾಗಬಾರದು, ಈ ಬಗ್ಗೆ ಯುವಕರಿಗೆ ಅರಿವು ಮೂಡಿಸಬೇಕು' ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷ ಆರ್.ಎಲ್.ಜಾಲಪ್ಪ, ನಿರ್ದೇಶಕ ಜೆ.ರಾಜೇಂದ್ರ, ಕುಲಸಚಿವ ಡಾ.ಎಸ್.ಕುಮಾರ್, ಕುಲಪತಿ ಡಾ.ಕೆ.ಎನ್.ವಿ.ಪ್ರಸಾದ್, ಪ್ರೊ ಚಾನ್ಸೆಲ್‌ಗಳಾದ ಎ.ವಿ.ಎಂ.ಕುಟ್ಟಿ, ಡಾ.ಸಿ.ಕೆ.ರಂಜನ್, ವೈದ್ಯಕೀಯ ಸೂಪರಿಂಟೆಂಡೆಂಟ್ ಡಾ.ಲಕ್ಷ್ಮಯ್ಯ, ಡೀನ್ ಡಾ.ಶ್ರೀರಾಮುಲು, ತುರ್ತು ಚಿಕಿತ್ಸಾ ವೈದ್ಯ ಡಾ.ಕೆ.ರಾಜೇಶ್ ಹಾಜರಿದ್ದರು.